## ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**ಸಿ. ಸಿ. ನಂ:1023/2018**

| | | | |
|---|---|---|---|
| ಸಾಕ್ಷಿಯ ಹೆಸರು | : ಸುಮಾ | **ದಿನಾಂಕ** | : **16/01/2024** |
| ಗಂಡನ ಹೆಸರು | : ಸುಂದರ್ | **ಸಿ ಡಬ್ಲ್ಯೂ** | : **01** |
| ವಯಸ್ಸು | : 35 ವರ್ಷ | **ಪಿ ಡಬ್ಲ್ಯೂ** | : **01** |
| ಉದ್ಯೋಗ | : ಕೂಲಿ ಕೆಲಸ | | |
| ವಿಳಾಸ | : ಉಡುವಾರೆ ಗ್ರಾಮ | | |

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸಸಅ ರವರಿಂದ :-**

ಆರೋಪಿ ನನಗೆ ಗೊತ್ತಿಲ್ಲ. ಚಾಸಾ 2 ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಮೃತ ಸುಂದರ್ ನನ್ನ ಗಂಡ. ನನಗೆ ಅಪಘಾತ ಹೇಗಾಯಿತು ಎಂದು ಗೊತ್ತಿಲ್ಲ. ನನ್ನ ಗಂಡ ಅಪಘಾತದಲ್ಲಿ ತೀರಿಕೊಂಡಾಗ ನನಗೆ ಮಾಹಿತಿ ಬಂದು ನಾನು ನೋಡಲು ಹೋಗಿದ್ದೆ. ಇದರ ಹೊರತಾಗಿ ನನಗೆ ಈ ಪ್ರಕರಣದ ಯಾವುದೇ ಮಾಹಿತಿ ಇರುವುದಿಲ್ಲ. ಅಪಘಾತ ಯಾರಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ಒಪ್ಪಿದ ಕಾರಣ ಸದರಿ ದೂರನ್ನು ನಿಪಿ 1 ಎಂದು , ಹಾಗೂ ಅದರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನಾನು ಯಾವುದೋ ಬೇರೆ ಕೆಲಸಕ್ಕೆ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಒಂದು ದಾಖಲೆಗೆ ಸಹಿ ಪಡೆದಿರುತ್ತಾರೆ. ನಾನು ಪೊಲೀಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ನಿಪಿ 1 ದೂರಿನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಅಪಘಾತದ ನಂತರ ನನ್ನ ಗಂಡನ ಬೈಕ್ ಆದ ಟಿ ಎನ್ -38 ಎಎಕ್ಸ್ 2785 ನ್ನು ಬಿಡಿಸಿಕೊಳ್ಳಲು ಹೋಗಿದ್ದೆ. ಈಗ ಸಾಕ್ಷಿಗೆ ಅದಕ್ಕೆ ಸಂಬಂದಪಟ್ಟ ಛಾಯಾಚಿತ್ರಗಳನ್ನು ತೋರಿಸಲಾಗಿ ಅವುಗಳನ್ನು ಒಪ್ಪಿದ ಕಾರಣ ಸದರಿ ಛಾಯಾಚಿತ್ರಗಳನ್ನು ನಿಪಿ2 ಮತ್ತು ನಿಪಿ 3 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ, ಪರಿಶೀಲಿಸಿ ಅನುಮತಿ ನೀಡಲಾಯಿತು)

**ಪಾಟಿ ಸವಾಲು ಎಪಿಪಿಯವರಿಂದ:**

ದಿನಾಂಕ **19.10.2018** ರಂದು ನನ್ನ ಗಂಡ ಸುಂದರ್ ರವರು ಅವರ ತಂಗಿ ಮನೆ ನರಸಿನಕುಪ್ಪೆ ಗ್ರಾಮಕ್ಕೆ ಹಬ್ಬಕ್ಕೆಂದು ತಮ್ಮ ಬೈಕ್ ಟಿಎನ್ **-38** ಎಎಕ್ಸ್ **2785** ರಲ್ಲಿ ಹೋಗಿದ್ದು ಹಬ್ಬ ಮುಗಿಕೊಂಡು ವಾಪಸ್ ಉಡುವಾರೆ ಗ್ರಾಮಕ್ಕೆ ಬರಲು ಅರಕಲಗೂಡು ತಾಲ್ಲೂಕಿನ ಗುಂಡೇಗೌಡನಕೊಪ್ಪಲು - ಅತ್ನಿ

ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಕೆಂಚೇಗೌಡರ ಜಮೀನಿನ ಹತ್ತಿರ ಬೈಕಿನಲ್ಲಿ ಹೋಗುತ್ತಿದ್ದಾಗ ಮಧ್ಯಾಹ್ನ ಸುಮಾರು 2.30 ಗಂಟೆ ಸಮಯಕ್ಕೆ ಆರೋಪಿ ತನ್ನ ಬೈಕ್ ಆದ ಕೆಎ-13 ಇಎಂ -7105 ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದ ಎಂದರೆ ಸರಿಯಲ್ಲ ಹಾಗೂ ಆರೋಪಿಯ ಬೈಕಿನ ಮುಂದೆ ಹೋಗುತ್ತಿದ್ದ ನನ್ನ ಗಂಡ ಸುಂದರ್ ರವರ ಬೈಕಿಗೆ ಹಿಂಭಾಗದಿಂದ ಡಿಕ್ಕಿಪಡಿಸಿದ ಎಂದರೆ ಸರಿಯಲ್ಲ. ಅತ್ತಿ ಉಪ್ಪಾರಕೊಪ್ಪಲು - ಬೋರನಹಳ್ಳಿ ರಸ್ತೆಯಲ್ಲಿ ಉಪ್ಪಾರಕೊಪ್ಪಲಿನ ತಿರುವಿನಲ್ಲಿ ಆರೋಪಿಯು ತನ್ನ ಬೈಕಿನಿಂದ ನನ್ನ ಗಂಡನ ಬೈಕಿಗೆ ಡಿಕ್ಕಿಪಡಿಸಿ ಆಗ ನನ್ನ ಗಂಡ ಬೈಕಿನಿಂದ ರಸ್ತೆಯ ಪಕ್ಕದಲ್ಲಿರುವ ಗುಂಡಿಗೆ ಬಿದ್ದರು ಎಂದರೆ ಸರಿಯಲ್ಲ. ಆಗ ಸುಂದರ್ ರವರ ತಲೆಯ ಹಿಂಭಾಗ ಮತ್ತು ಎಡಹಣೆಯ ಹತ್ತಿರ ರಕ್ತಗಾಯಗಳಾಗಿದ್ದವು ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಗಂಡ ಸುಂದರ್ ರವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಅಪಘಾತವನ್ನು ಆರೋಪಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತವಾದಾಗ ಸ್ಥಳದಲ್ಲಿ ಇದ್ದ ಚಾಸಾ 2 ರವರು ನನ್ನ ಗಂಡನನ್ನು ಎತ್ತಿ ಸುಧಾರಿಸಲು ಹೋಗಿದ್ದರು ಎಂದರೆ ಸರಿಯಲ್ಲ. ನಂತರ ಚಾಸಾ 3 ರವರು ಅಪಘಾತದ ವಿಚಾರವನ್ನು ನನಗೆ ಪೋನ್ ಮುಖಾಂತರ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತದ ನಂತರ ನಾನು ನನ್ನ ಗಂಡನನ್ನು ನೋಡಲು ಹೋಗಿರುತ್ತೇನೆ ಎಂದರೆ ಸರಿ. ಸದರಿ ಅಪಘಾತಕ್ಕೆ ಕಾರಣ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ತನ್ನ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನನ್ನ ಗಂಡ ಓಡಿಸುತ್ತಿದ್ದ ಬೈಕಿಗೆ ಡಿಕ್ಕಿಪಡಿಸಿದ್ದರಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದ ಕುರಿತು ನಾನು ನಿಪಿ 1 ರಂತೆ ಪೊಲೀಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದ ನಂತರ ನಾನು ನನ್ನ ಗಂಡನ ಬೈಕನ್ನು ನಷ್ಟ ಭರ್ತಿ ಬಾಂಡ್ ಬರೆದುಕೊಟ್ಟು ಪೊಲೀಸ್ ಠಾಣೆಯಿಂದ ಬಿಡಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿ. ಈ ಪ್ರಕರಣದ ಎಲ್ಲಾ ವಿಚಾರ ನನಗೆ ತಿಳಿದಿದ್ದರೂ ಸಹ ಆರೋಪಿ ನನ್ನ ಊರಿನವರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಇಲ್ಲ ಎಂದು ನುಡಿದಿರುತ್ತಾರೆ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

ಜೆಎಂಎಫ್‌ಸಿ, ಅರಕಲಗೂಡು.